JULY 26, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**1.** ಕಾರ್ಗಿಲ್ ವಿಜಯೋತ್ಸವ ದಿನದ ಹಿನ್ನೆಲೆ, ಅಖಿಲ ಕರ್ನಾಟಕ ವಿಶ್ರಾಂತ ಸೈನಿಕರ ಸಂಘದ ಪದಾಧಿಕಾರಿಗಳು, ಧಾರವಾಡದ ಗಾಂಧಿ ಚೌಕದಿಂದ, ಜಿಲ್ಲಾಧಿಕಾರಿ ಕಚೇರಿ ಆವರಣದ, ಕಾರ್ಗಿಲ್ ಸ್ತೂಪದ ವರೆಗೆ, ಇಂದು ಬೆಳಗ್ಗೆ ತಿರಂಗಾ ಯಾತ್ರೆ, ಕೈಗೊಂಡು, ಕಾರ್ಗಿಲ್ ಯುದ್ಧದ ವೀರಸೇನಾನಿಗಳಿಗೆ ಗೌರವಾರ್ಪಿಸಿದರು. ಶ್ರೀ ಉಳವಿ ಚೆನ್ನಬಸವೇಶ್ವರ ದೇಗುಲದ ಪ್ರಾಂಗಣದಲ್ಲಿ, ಇನ್ನು ಕೆಲವೇ ಕ್ಷಣಗಳಲ್ಲಿ, ಯೋಧರಿಗೆ ಸನ್ಮಾನ ಸಮಾರಂಭ ಜರುಗಲಿದೆ.

<><><>

**2.** ಕೃಷಿ ಸಂಶೋಧನಾ ಸಮ್ಮೇಳನ, ಸ್ನಾತಕೋತ್ತರ ವಿದ್ಯಾರ್ಥಿಗಳಲ್ಲಿ, ಬಹುಶಿಸ್ತೀಯ ಮತ್ತು ಅಂತರ್ ಶಿಸ್ತೀಯ ಕಲಿಕೆ, ಹೊಸ ಸಂಶೋಧನಾ ಸಾಧ್ಯತೆಗಳಿಗೆ ತೆರೆದುಕೊಳ್ಳಲು, ಸಹಕಾರಿ ಎಂದು, ಹೊಸ ದಿಲ್ಲಿಯ ಕೃಷಿ ಸಂಶೋಧನಾ ಮಂಡಳಿಯ ಸಹಾಯಕ ಮಹಾ ನಿರ್ದೇಶಕಿ, ಸೀಮಾ ಜಗ್ಗಿ ತಿಳಿಸಿದ್ದಾರೆ. ಧಾರವಾಡ, ಕೃಷಿ ವಿಶ್ವವಿದ್ಯಾಲಯದಲ್ಲಿ ಆಯೋಜಿತ, ಎರಡು ದಿನಗಳ, **8**ನೇ ಸ್ನಾತಕೋತ್ತರ ಸಂಶೋಧನಾ ಸಮ್ಮೇಳನವನ್ನು, ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ ಉದ್ಘಾಟಿಸಿ, ಅವರು ಮಾತನಾಡಿದರು. ಕೃಷಿ ಕ್ಷೇತ್ರ, ಹಲವು ಸವಾಲುಗಳನ್ನು ಎದುರಿಸುತ್ತಿದ್ದು, ನಿರಂತರ ಸಂಶೋಧನೆ ಅಗತ್ಯ. ದೇಶದಲ್ಲಿ ಒಟ್ಟು, **77** ಕೃಷಿ ವಿಶ್ವವಿದ್ಯಾಲಯಗಳಿದ್ದು, **300** ಜನ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದೆ, ಎಂದರು. ಧಾರವಾಡ ಕೃಷಿ ವಿಶ್ವವಿದ್ಯಾಲಯದ, **25** ಸ್ನಾತಕೋತ್ತರ ಅಧ್ಯಯನ ವಿಭಾಗಗಳ, **200** ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಇಂದು ಸಹ ತಮ್ಮ ಸಂಶೋಧನಾ ಫಲಿತಾಂಶಗಳನ್ನು, ಮಂಡಿಸುತ್ತಿದ್ದಾರೆ.

<><><>

**3.** ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ, ಕಾರ್ಮಿಕರ ಕಲ್ಯಾಣ ಮಂಡಳಿ, ನೊಂದಾಯಿತ ಕಾರ್ಮಿಕರ ಮಕ್ಕಳ, ಶೈಕ್ಷಣಿಕ ಪ್ರಗತಿಗಾಗಿ, **31** ಜಿಲ್ಲೆಗಳಲ್ಲಿ ವಸತಿ ಶಾಲೆಗಳನ್ನು ಸ್ಥಾಪಿಸಲು, ಸಾವಿರದ ನೂರಾ **25** ಕೋಟಿ ರೂಪಾಯಿ ಬಿಡುಗಡೆ ಮಾಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಂಗಡಪತ್ರದಲ್ಲಿ, ಕಟ್ಟಡ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು, **6** ರಿಂದ **12**ನೇ ತರಗತಿ ವರೆಗೆ, ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡಲು, ಅನುಕೂಲ ಕಲ್ಪಿಸಿದ್ದಾರೆ.

<><><>

**4.** ಕೇಂದ್ರ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಅವರು, ಮಹಾದಾಯಿ ಸೇರಿದಂತೆ, ಕಳಸಾ, ಬಂಡೂರಿ ನೀರು ಹಂಚಿಕೆ ವಿವಾದವನ್ನು, ಕಾನೂನು ಪ್ರಕಾರ ಬಗೆಹರಿಸುವ ಭರವಸೆ ನೀಡಿದ್ದಾರೆ ಎಂದು, ಮಾಜಿ ಶಾಸಕ ಶಂಕರಪಾಟೀಲ ಮುನೇನಕೊಪ್ಪ ತಿಳಿಸಿದ್ದಾರೆ. ಗೋವಾ ಮುಖ್ಯಮಂತ್ರಿಗಳ ಹೇಳಿಕೆ ಹಿನ್ನೆಲೆ, ಅವರು ಸ್ಪಷ್ಟನೆ ನೀಡಿದ್ದಾರೆ.

<><><>

5. ಈ ಮಧ್ಯೆ, ಬೆಂಗಳೂರಿನಲ್ಲಿ ಪ್ರತಿಕ್ರಿಯಿಸಿದ ಗೃಹ ಖಾತೆ ಸಚಿವ ಜಿ. ಪರಮೇಶ್ವರ, ಮಹಾದಾಯಿ ವಿಚಾರದಲ್ಲಿ, ಕರ್ನಾಟಕ ಮತ್ತು ಗೋವಾ ಮಧ್ಯೆ, ಸಂಘರ್ಷ ಏರ್ಪಟ್ಟಿದೆ. ಕೇಂದ್ರ ಸರ್ಕಾರ ಮಧ್ಯಸ್ಥಿಕೆ ವಹಿಸಿ, ಬಗೆಹರಿಸಬೇಕು ಎಂದು, ಒತ್ತಾಯಿಸಿದ್ದಾರೆ.

<><><>

6. ಮಾಲತಿ ನದಿಯ ನೀರಿನ ಮಟ್ಟದಲ್ಲಿ ಹೆಚ್ಚಳವಾಗಿದೆ; ಶೃಂಗೇರಿ, ಹೊಸಗದ್ದೆ ಹಾಗೂ ಕುಂದಾದ್ರಿ ಮಧ್ಯದ, ಹೊನ್ನೆತಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯ, ನಾಬಳ ಬಳಿ ರಸ್ತೆ ಬಂದ್ ಆಗಿದೆ; ಶೃಂಗೇರಿಯಿಂದ ಕುಂದಾದ್ರಿ ಹಾಗೂ ಗುಡ್ಡೇಕೇರಿಗೆ ಬರುವ ಪ್ರವಾಸಿಗರು, ಬದಲಿ ಮಾರ್ಗದಲ್ಲಿ ಸಂಚರಿಸಲು ಕೋರಲಾಗಿದೆ.

<><><>

7. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ 136ನೇ ಸಂಸ್ಥಾಪನಾ ದಿನಾಚರಣೆಯ, ಸಮಾರೋಪ ಇಂದು ಸಂಜೆ 5.30ಕ್ಕೆ, ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ, ಜರುಗಲಿದೆ. 'ಕನ್ನಡ ಪ್ರಪಂಚ ಡಾಕ್ಟರ ಪಾಟೀಲ ಪುಟ್ಟಪ್ಪ ಪ್ರಶಸ್ತಿ'ಯನ್ನು, ಬೆಂಗಳೂರಿನ ಹಿರಿಯ ಪತ್ರಕರ್ತ, ಶಾ.ಮಂ. ಕೃಷ್ಣರಾಯ ಅವರಿಗೆ, ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿ ಎ.ಎಂ ಖಾನ್ ಪ್ರದಾನಿಸಿ, ಗೌರವಿಸಲಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಅವರು ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಶಾ.ಮಂ. ಕೃಷ್ಣರಾಯ ಧ್ವನಿ 35 ಸೆಕೆಂದುಗಳು

<><><>

8. ಖಾಸಗಿ, ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ, ನೇಮಕಾತಿ ಹೊಂದಿ, ಬಿ.ಇಡಿ. ಪದವಿ ಹೊಂದಿರದ, 364 ಜನ ಉಪನ್ಯಾಸಕರಿಗೆ, ಸರ್ಕಾರ, ವೇತನ ಸಹಿತ ಬಿ.ಇಡಿ. ಪದವಿ ವ್ಯಾಸಂಗ ಮಾಡಲು, ಅವಕಾಶ ನೀಡಿದೆ; ಇದರಿಂದ, ಪಿ.ಯು. ಉಪನ್ಯಾಸಕರು ಕೆಲಸ ಕಳೆದುಕೊಳ್ಳುವ ಭೀತಿ ದೂರವಾಗಿದೆ ಎಂದು, ವಿಧಾನ ಪರಿಷತ್ ಸಭಾಪತಿ, ಬಸವರಾಜ ಹೊರಟ್ಟಿ, ಹುಬ್ಬಳ್ಳಿಯಲ್ಲಿ ತಿಳಿಸಿದ್ದಾರೆ.

<><><>

9. ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರು, ಮಂಗಳೂರಿನ, ಭಾರತೀಯ ರೆಡ್‌ಕ್ರಾಸ್ ಸೊಸೈಟಿಯ, ಶತಮಾನೋತ್ಸವ ಕಟ್ಟಡದ ಉದ್ಘಾಟನೆಯನ್ನು, ಇನ್ನು ಕೆಲವೇ ಕ್ಷಣಗಳಲ್ಲಿ ನೆರವೇರಿಸಲಿದ್ದಾರೆ. ಮೂಡಬಿದಿರೆ, ಆಳ್ವಾಸ್ ಕಾಲೇಜಿನಲ್ಲಿ ಇಂದು ಮಧ್ಯಾಹ್ನ 3:30 ಕ್ಕೆ, ಪ್ರೇರಣಾ ದಿನದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಪಾಲ್ಗೊಳ್ಳಲಿದ್ದಾರೆ.

<><><>

10. ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕುಗಳಲ್ಲಿ, ಕೇಂದ್ರ ಪುರಸ್ಕೃತ, ಜಲ ಜೀವನ್ ಮಿ 'ನ್ ಯೋಜನೆಯಡಿ ಕೈಗೊಂಡ, ಕಾಮಗಾರಿಗಳ ಪ್ರಗತಿಯನ್ನು, ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಎಸ್.ಯುಕೇಶಕುಮಾರ ಭೇಟಿ ನೀಡಿ, ಪರಿಶೀಲಿಸಿದರು. ಎಚ್.ಡಿ.ಕೋಟೆ ತಾಲೂಕು, ಆಲನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ, ಕೃ ್ಣಯ್ಯನ ಮುದ್ದಯ್ಯನ ಹುಂಡಿಯಲ್ಲಿ, ಮೀಟರ್ ರೀಡಿಂಗ್ ಪ್ರಾರಂಭಿಸುವ ಬಗ್ಗೆ, ಅರಿವು ಮೂಡಿಸಲು, ಪಿ.ಡಿ.ಓ.ಗೆ ಸೂಚಿಸಿದರು.

<><><>

11. ಹಾವೇರಿ ಜಿಲ್ಲೆ, ರಟ್ಟೀಹಳ್ಳಿ ತಾಲೂಕಿನ, ಮದಗ–ಮಾಸೂರು ಕೆರೆಯ, ಎಡದಂಡೆ ಹಾಗೂ ಬಲದಂಡೆ ಕಾಲುವೆಗಳ, ಆಧುನೀಕರಣ ಕಾಮಗಾರಿಗೆ, 52 ಕೋಟಿ 20 ಲಕ್ಷ ರೂಪಾಯಿ ಮಂಜೂರು ಮಾಡಲು, ಸಚಿವ ಸಂಪುಟ ಸಭೆ ಆಡಳಿತಾತ್ಮಕ ಅನುಮೋದನೆ ನೀಡಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ, ಶಿವಾನಂದ ಪಾಟೀಲ ತಿಳಿಸಿದ್ದಾರೆ. 14ನೇ

ಶತಮಾನದಲ್ಲಿ, ವಿಜಯನಗರ ಅರಸರ ಆಳ್ವಿಕೆಯಲ್ಲಿ, ನಿರ್ಮಾಣಗೊಂಡ, ಮಾಸೂರು ಅಣೆಕಟ್ಟೆ ಸುಸ್ಥಿತಿಯಲ್ಲಿದೆ. ಕಾಲುವೆಗಳ ಆಧುನೀಕರಣದಿಂದ, ಒಟ್ಟು 715 ಹೆಕ್ಟರ್ ಕೃಷಿ ಭೂಮಿಗೆ ನೀರೊದಗುತ್ತದೆ ಎಂದರು.

<><><>

12. ನಾಳೆ ಭಾನುವಾರ ಬೆಳಗ್ಗೆ 11 ಗಂಟೆಗೆ, ಆಕಾಶವಾಣಿಯ, ಬಹುಶ್ರುತ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ದೇಶ, ವಿದೇಶಗಳ ಭಾರತೀಯರನ್ನುದ್ದೇಶಿಸಿ ಮಾತನಾಡಲಿದ್ದಾರೆ. ಇದು ಮನದ ಮಾತು ಸರಣಿಯ, 124ನೇ ಆವೃತ್ತಿಯಾಗಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.

ಹರ್ಷ.